





ಪಾಂಡವಪುರ ತಾಲ್ಲೂಕು ಚಿಕ್ಕಾಡೆ ಹಳ್ಳಿಯಲ್ಲಿ ಅಗರಬತ್ತಿ ತಯಾರಿಕೆ. (ಚಿತ್ರ: ರವಿಕುಮಾರ್)

ತಯಾರಿಸುತ್ತಿದ್ದರು. ಇದು ಸಂಪೂರ್ಣವಾಗಿ ಹ್ಯಾಂಡ್‌ಮೇಡ್ ಆಗಿದ್ದು, ಶ್ರಮ ಹೆಚ್ಚು ಬೇಕಾಗುತ್ತಿತ್ತು. ಜತೆಗೆ ಉತ್ಪಾದನೆಯೂ ಕಡಿಮೆ. ಕಡ್ಡಿ ತಯಾರಿಸಲು ನಿಧಾನವಾಗಿ ಯಂತ್ರವನ್ನು ಬಳಸಿದರೂ ಚೌಕಾಕಾರದ ಕಡ್ಡಿಗೆ ಬೇಡಿಕೆ ಕಡಿಮೆ ಆಗಲಾರಂಭಿಸಿತು. ಅಲ್ಲದೆ ಚೌಕಾಕಾರದ ಕಡ್ಡಿ ತಯಾರಿಸಲು ಬಿದಿರನ್ನು ಈಶಾನ್ಯ ಭಾರತದ ಕೆಲವು ಭಾಗಗಳಿಂದಲೇ ತರಬೇಕಾಗಿತ್ತು. ಈ ಜಾಗವನ್ನು ವೃತ್ತಾಕಾರದ ಬಿದಿರು ಕಡ್ಡಿಗಳು ಆವರಿಸಿದವು. ಇದು ಅತ್ಯಂತ ವೇಗವಾಗಿ ಮಾಡಬಲ್ಲಂಥದ್ದು, ಉತ್ಪಾದನೆಯೂ ಹೆಚ್ಚು. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನಲ್ಲಿ ಸುಮಾರು 30 ಅಗರಬತ್ತಿ ತಯಾರಿಕಾ ಘಟಕಗಳಿವೆ. ಎಲ್ಲವೂ ಕಚ್ಚಾ ಅಗರಬತ್ತಿ ತಯಾರಿಸಿ ಕಂಪೆನಿಗಳಿಗೆ ನೀಡುತ್ತವೆ. ಅಲ್ಲಿ ಸುಗಂಧ ಸೇರಿಸಿ ಪ್ಯಾಕಿಂಗ್ ಆದ ಊದಿನಕಡ್ಡಿಗಳು ಮಾರುಕಟ್ಟೆಗೆ ಸಿದ್ಧವಾಗುತ್ತವೆ.

ಪಾಂಡವಪುರ ತಾಲ್ಲೂಕು ಚಿಕ್ಕಾಡೆ ಹಳ್ಳಿಯಲ್ಲಿ ಅನೇಕ ಮಹಿಳೆಯರು ಅಗರಬತ್ತಿ ಕಾಯಕದಲ್ಲಿ ತೊಡಗಿಸಿಕೊಂಡು ಸ್ವಾವಲಂಬಿಗಳಾಗಿದ್ದಾರೆ.

‘ನಮ್ಮಲ್ಲಿ ಎಂಟು ಮಂದಿ ಮಹಿಳೆಯರು ಅಗರಬತ್ತಿ ತಯಾರಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಇವರಿಗೆ ಕೆಲಸದಲ್ಲಿ ಯಾವುದೇ ನಿರ್ಬಂಧ ಹೇರಿಲ್ಲ. ಸಮಯದ ಕರಾರು ಕೂಡ ಇಲ್ಲ. ಮನೆಯಲ್ಲಿ ಕೆಲಸ ಮಾಡಿ ಮಕ್ಕಳನ್ನು ಶಾಲೆಗೆ ಬಿಟ್ಟು ಉಳಿದ ಸಮಯವನ್ನು ಇಲ್ಲಿ ಕೆಲಸಕ್ಕಾಗಿ ಮೀಸಲಿಟ್ಟಿದ್ದಾರೆ. ಅಲ್ಲದೆ ವಯಸ್ಸಿನ ನಿರ್ಬಂಧವೂ ಇಲ್ಲ. 18 ವರ್ಷ ತುಂಬಿದ ಮೇಲೆ ಇಳಿ ವಯಸ್ಸಿನವರೆಗೆ ಯಾರು ಬೇಕಾದರೂ ಇಲ್ಲಿ ಕೆಲಸ ಮಾಡಬಹುದು. ಹೆಚ್ಚಿನ ಕೌಶಲವನ್ನು ಇದು ನಿರೀಕ್ಷಿಸದೇ ಇರುವ ಕಾರಣ ಅವಿದ್ಯಾವಂತ ಮಹಿಳೆಯರೂ ಜೀವನೋಪಾಯಕ್ಕೆ ಇದನ್ನು ಕಂಡುಕೊಂಡಿದ್ದಾರೆ. ಅಗರಬತ್ತಿ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳಾದ ಇದ್ದಿಲು ಪುಡಿ, ಅಂಟು, ಮರದ ಪುಡಿ, ಬಿದಿರು ಎಲ್ಲವನ್ನೂ ಅಗರಬತ್ತಿ ಕಂಪೆನಿಗಳೇ ಸರಬರಾಜು ಮಾಡುತ್ತವೆ. ತಿಂಗಳಿಗೆ 60 ಸಾವಿರ ರೂಪಾಯಿ ವರಮಾನವಿದೆ. ಖರ್ಚು, ಕೆಲಸಗಾರರ ಸಂಬಳ ಎಲ್ಲ ಕಳೆದರೂ 20 ಸಾವಿರ ರೂಪಾಯಿ ಉಳಿಯುತ್ತದೆ’ ಎಂದು ಮಾಹಿತಿ ನೀಡುತ್ತಾರೆ ಚಿಕ್ಕಾಡೆಯಲ್ಲಿ ಅಗರಬತ್ತಿ ಘಟಕ ನಡೆಸುತ್ತಿರುವ ರವಿ.

‘ಇಂದಿನ ಕಾಲದಲ್ಲಿ ವ್ಯವಸಾಯವನ್ನೇ ನೆಚ್ಚಿಕೊಂಡು ಜೀವನ ನಡೆಸಲು ಅಸಾಧ್ಯ. ಕೃಷಿ ಇಲ್ಲದ ಸಮಯದಲ್ಲಿ ಅಗರಬತ್ತಿ ಕಾಯಕ ಕೈಹಿಡಿಯುತ್ತದೆ. ಹೀಗಾಗಿ ನಮ್ಮ ಇಡೀ ಕುಟುಂಬ ಅಗರಬತ್ತಿ ತಯಾರಿಕೆಯಲ್ಲೇ ತೊಡಗಿಸಿಕೊಂಡಿದ್ದೇವೆ. ಇಡೀ ದಿನ ಕೆಲಸ ಮಾಡಿದರೂ ಆರೋಗ್ಯ ಸಮಸ್ಯೆ ಏನೂ ಇಲ್ಲ. ಕಳೆದ 12 ವರ್ಷಗಳಿಂದ ಅಗರಬತ್ತಿ ಹೊಸೆಯುವ ಕೆಲಸವನ್ನು ಮಾಡುತ್ತಾ ಬಂದಿದ್ದೇನೆ. ಹಳ್ಳಿಯಲ್ಲಿ ಸ್ವಸಹಾಯ ಸಂಘದ ಸದಸ್ಯೆಯಾಗಿ ಹಣವನ್ನು ಉಳಿಸಿ ಕುಟುಂಬದ ಆರ್ಥಿಕ ಹೊರೆಯನ್ನೂ ಕಡಿಮೆ ಮಾಡಿದ್ದೇನೆ ಎಂಬ ತೃಪ್ತಿ ನನಗಿದೆ’ ಎಂದು ಹೇಳುತ್ತಾರೆ ಚಿಕ್ಕಾಡೆಯಲ್ಲಿ ಅಗರಬತ್ತಿ ತಯಾರಿಕಾ ಘಟಕದಲ್ಲಿ ಕೆಲಸ ಮಾಡುತ್ತಿರುವ ಮುಬಿನ್‌ತಾಜ್.

ಅಗರಬತ್ತಿ ಕೆಲಸಕ್ಕೆ ಸೇರಿದ ಮೇಲೆ ಈ ಹಳ್ಳಿಗಳ ಬಹಳಷ್ಟು ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸಿದೆ. ಈ ಮಾತಿಗೆ ಚಿಕ್ಕಾಡೆ ಹಳ್ಳಿಯ ಚಂದ್ರಕಲಾ ಅವರೂ ಹೊರತಲ್ಲ. ಕಳೆದ ಮೂರು ವರ್ಷಗಳಿಂದ ಅಗರಬತ್ತಿ ತಯಾರಿಕೆಯಲ್ಲಿ ತೊಡಗಿರುವ ಚಂದ್ರಕಲಾ ಮಗನನ್ನು ಐಟಿಐ ಓದಿಸುತ್ತಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುತ್ತದೆ. ಸ್ವಸಹಾಯ ಸಂಘಗಳ ಮೂಲಕ ಹಣ ಉಳಿತಾಯ ಮಾಡುತ್ತೇನೆ. ಈ ಕೆಲಸಕ್ಕೆ ಸೇರುವ ಮುನ್ನ ಮನೆಯಲ್ಲೇ ಕಾಲ ಕಳೆಯುತ್ತಿದ್ದೆ. ಆದರೆ ಈಗ ಜೀವನಮಟ್ಟ ಬಹಳಷ್ಟು ಸುಧಾರಿಸಿದೆ.

## ಬಿಡುವಿನ ವೇಳೆ ಕಳೆಯಲು

ಕೆಲವು ಮಹಿಳೆಯರು ಅಗರಬತ್ತಿ ಉದ್ಯಮವನ್ನು ಬಿಡುವಿನ ವೇಳೆ ಕಳೆಯುವುದಕ್ಕಾಗಿಯೂ ಮಾಡುತ್ತಿದ್ದಾರೆ. ಪಾಂಡವಪುರದ ಹರಳಹಳ್ಳಿಯ ಶೈಲಜಾ ಗೋವಿಂದರಾಜ್ ಈ ಮಾತಿಗೆ ತಾಜಾ ಉದಾಹರಣೆ. ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷೆಯಾಗಿರುವ ಶೈಲಜಾ ಕಳೆದ ಎರಡು ವರ್ಷಗಳಿಂದ ಅಗರಬತ್ತಿ ಉದ್ಯಮ ನಡೆಸಿಕೊಂಡು ಬರುತ್ತಿದ್ದಾರೆ. ಹಳ್ಳಿಯ ಕೆಲವು ಮಹಿಳೆಯರಿಗೆ ಉದ್ಯೋಗಾವಕಾಶವನ್ನೂ ಕಲ್ಪಿಸಿಕೊಟ್ಟಿದ್ದಾರೆ.

‘ಹಳ್ಳಿಯ ಬಡ ಹೆಣ್ಣುಮಕ್ಕಳು ಸ್ವಾವಲಂಬನೆಯ ಹಾದಿ ಹಿಡಿಯಲಿ ಎಂಬ ಉದ್ದೇಶದಿಂದ ಅಗರಬತ್ತಿ ಉದ್ಯಮ ಆರಂಭಿಸಿದೆ. ಇಲ್ಲಿ ಕಚ್ಚಾವಸ್ತುಗಳನ್ನು ಪಡೆದುಕೊಂಡು ಅಗರಬತ್ತಿ ತಯಾರಿಸಿ ಪ್ಯಾಕಿಂಗ್ ಮಾಡಿ ಮತ್ತೆ ಕಂಪೆನಿಗಳಿಗೆ ಕೊಡುತ್ತೇವೆ. ತಿಂಗಳಿಗೆ ಸುಮಾರು 3 ಟನ್ ಬತ್ತಿ ತಯಾರಿಸುತ್ತೇವೆ. ಬಿಡುವಿನ ವೇಳೆ ಕಳೆದಂತೆಯೂ ಆಗುತ್ತದೆ, ಮಹಿಳೆಯರಿಗೆ ಕೆಲಸ ಕೊಡಿಸಿದ ಹಾಗೆಯೂ ಆಗುತ್ತದೆ’ ಎಂದು ಹೇಳುತ್ತಾರೆ ಶೈಲಜಾ.

ಇಲ್ಲೇ ಕೆಲಸ ಮಾಡುವ ಸಮೀನಾಗೆ ಅಗರಬತ್ತಿ ಉದ್ಯಮ ಸಂತೃಪ್ತಿ ತಂದಿದೆಯಂತೆ. ಮೊದಲು ಗಾರ್ಮೆಂಟ್ಸ್ ನಲ್ಲಿ ದುಡಿಯುತ್ತಿದ್ದರಂತೆ. ಆಗ ಮಕ್ಕಳನ್ನು ಕರೆದುಕೊಂಡು ಹೋಗಲು ನಿರ್ಬಂಧದಿಂದ ಹಿಡಿದು ತಲೆನೋವೇ ಜಾಸ್ತಿ ಇತ್ತು. ಈಗ ರೇಷನ್ ಕೊಳ್ಳಲು, ಮಕ್ಕಳನ್ನು ಶಾಲೆಗೆ ಕಳಿಸಲು, ಅನಾರೋಗ್ಯವಿದ್ದಾಗ ವಿಶ್ರಾಂತಿ ಪಡೆಯುವುದರಿಂದ ಹಿಡಿದು ಎಲ್ಲದಕ್ಕೂ ಅನುಕೂಲವಾಗಿದೆ. ಜತೆಗೆ ಸ್ವತಂತ್ರ ಜೀವನ ನಡೆಸಲು ಅನುವಾಗಿದೆಯಂತೆ.

ದೇಶದಲ್ಲಿ ಅಗರಬತ್ತಿ ಉದ್ಯಮದಲ್ಲಿ ತೊಡಗಿಸಿಕೊಂಡವರು– **80** ಲಕ್ಷ ಜನ. ಇವರಲ್ಲಿ ಮಹಿಳೆಯರು– ಶೇ.**80**
ಕರ್ನಾಟಕದಲ್ಲಿ ಅಗರಬತ್ತಿ ಕಾರ್ಖಾನೆಯಲ್ಲಿ ದುಡಿಯುವ ಮಹಿಳೆಯರು **2.5** ಲಕ್ಷ ಮಂದಿ. ಮೈಸೂರಿನಲ್ಲಿ– **10** ಸಾವಿರ ಮಹಿಳೆಯರು.
ಕೋಲಾರದಲ್ಲಿ **8**ರಿಂದ **10** ಸಾವಿರ ಮಹಿಳೆಯರು.

## ಪ್ಯಾಕಿಂಗ್‌ನಲ್ಲೂ ಮಹಿಳೆಯರೇ..!

ಪಾಂಡವಪುರ ತಾಲ್ಲೂಕು ಪಾಲಹಳ್ಳಿಯ ಮಹಿಳೆಯರಿಗೆ ಅಗರಬತ್ತಿ ಪ್ಯಾಕಿಂಗ್ ಮಾಡುವುದೇ ನಿತ್ಯ ಕಾಯಕ. ಸೈಕಲ್ ಬ್ರ್ಯಾಂಡ್‌ನಂತಹ ದೊಡ್ಡ ದೊಡ್ಡ ಅಗರಬತ್ತಿ ಕಂಪೆನಿಗಳು ತಯಾರಾದ ಅಗರಬತ್ತಿಗಳನ್ನು ಲೆಕ್ಕ ಹಾಕಿ ಕವರ್‌ಗೆ ತುಂಬಿ ಪ್ಯಾಕಿಂಗ್ ಮಾಡಲು ಪಾಲಹಳ್ಳಿಗೆ ಕಳಿಸುತ್ತವೆ. ಇಲ್ಲಿನ ಕೆ.ಪಿ. ಪ್ರೇಮಾ ಪ್ಯಾಕಿಂಗ್ ಘಟಕದಲ್ಲಿ ಸುಮಾರು 25 ಮಹಿಳೆಯರು ಅಗರಬತ್ತಿ ಪ್ಯಾಕಿಂಗ್ ಮಾಡುತ್ತಾರೆ. ಅದರಲ್ಲಿ ಎಕ್ಸ್‌ಪೋರ್ಟ್ ಕ್ವಾಲಿಟಿ, ಲೋಕಲ್ ಸೇಲ್‌ಗೆ.. ಹೀಗೆ ಬೇರೆ ಬೇರೆ ವಿಧಗಳಿವೆ. 64 ವರ್ಷದ ಮಹದೇವಮ್ಮ ಹೇಳುವ ಪ್ರಕಾರ ‘100 ಡಜನ್ ಅಗರಬತ್ತಿ ಪ್ಯಾಕ್ ಮಾಡಿದ್ರೆ 150 ರೂಪಾಯಿ ಸಿಗುತ್ತದೆ. ತಿಂಗಳಿಗೆ ಐದು ಸಾವಿರ ರೂಪಾಯಿ ವರಮಾನ ಆಗುತ್ತದೆ. ಇಲ್ಲಿ ಸೇರಿದ ಮೇಲೆ ಮನೆಯ ಆರ್ಥಿಕ ಸ್ಥಿತಿ ಬಹಳಷ್ಟು ಸುಧಾರಿಸಿದೆ’ ಎನ್ನುತ್ತಾರೆ.

‘ಕರ್ನಾಟಕದಲ್ಲಿ ಸುಮಾರು 800 ಪ್ಯಾಕಿಂಗ್ ಘಟಕಗಳಿವೆ. 25 ಸಾವಿರಕ್ಕೂ ಹೆಚ್ಚು ಮಹಿಳೆಯರು ಪ್ಯಾಕಿಂಗ್‌ನಲ್ಲೇ ತೊಡಗಿಸಿಕೊಂಡಿದ್ದಾರೆ. ಹೆಚ್ಚಿನ ಶ್ರಮ, ಕೌಶಲ, ವಯಸ್ಸಿನ ನಿರ್ಬಂಧವನ್ನು ಹಾಕದೇ ಇರುವುದರಿಂದ ಸಾಕಷ್ಟು ಮಹಿಳೆಯರಿಗೆ ಅನುಕೂಲವಾಗಿದೆ’ ಎನ್ನುತ್ತಾರೆ ಸೈಕಲ್ ಬ್ರ್ಯಾಂಡ್ ಅಗರಬತ್ತಿ ಕಂಪೆನಿಯ ಸಿಇಒ ಸುರೇಶ್.